ವಿಜಯವಾಣಿ
ಕನ್ನಡಿಗರ ಧ್ವನಿ

**Tuesday 22nd June 2021, Page No.05**

**Vaccine Campaign at RV College of Engineering**

ವಿಜಯವಾಣಿ ನಂ 1

**ಬಿಬಿಎಂಪಿ ಸಹಯೋಗದಲ್ಲಿ ಇಂದೂ ಮುಂದುವರಿಕೆ | ನಿತ್ಯ ಸಾವಿರ ಮಂದಿಗೆ ಕರೊನಾ ವ್ಯಾಕ್ಸಿನ್ ನೀಡಿಕೆ**

# ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಲಸಿಕೆ ಅಭಿಯಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮೈಸೂರು ರಸ್ತೆಯ ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಆವರಣದಲ್ಲಿ ಸೋಮವಾರ ಕರೊನಾ ಲಸಿಕೆ ಅಭಿಯಾನ ಆಯೋಜಿಸಲಾಗಿತ್ತು.

ಬಿಬಿಎಂಪಿ ಸಹಯೋಗವಿದ್ದ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ನಗರ ಪ್ರದೇಶದ ನಿವಾಸಿಗಳು ಸೇರಿ ಹಲವರು ಲಸಿಕೆ ಪಡೆದರು. ಅಭಿಯಾನದ ಉದ್ಘಾಟನೆ ಸಂದರ್ಭದಲ್ಲಿ ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ, ರಾಜರಾಜೇಶ್ವರಿನಗರ ನೋಡಲ್ ಅಧಿಕಾರಿ ಸಿ. ಬಸಪ್ಪ, ಬಿಬಿಎಂಪಿ ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ಮಾತನಾಡಿ, ಮಂಗಳವಾರವೂ (ಜೂ.22) ಲಸಿಕೆ ಅಭಿಯಾನ ಮುಂದುವರಿಯಲಿದೆ. ನಿತ್ಯ ಸಾವಿರ ಜನರಿಗೆ ಲಸಿಕೆ ನೀಡಲಾ ಗುತ್ತದೆ. ನಮ್ಮ ಕಾಲೇಜಿನಲ್ಲಿ ಲಸಿಕೆ ವ್ಯವಸ್ಥೆ ಕಲ್ಪಿಸುವಂತೆ ಸಾಕಷ್ಟು ಜನರು ಬೇಡಿಕೆ ಇಟ್ಟಿದ್ದರಿಂದ ಅಭಿಯಾನ ಆಯೋಜಿಸಿದ್ದೇವೆ. ನಮ್ಮ ಬೋಧಕ-ಬೋಧಕೇತರ ವರ್ಗದಲ್ಲಿ ಅರ್ಧದಷ್ಟು ಜನರು ಈಗಾಗಲೇ ಲಸಿಕೆ ಪಡೆದಿದ್ದಾರೆ, ಉಳಿದವರು ನೀಡಲಾಗುತ್ತಿದೆ ಎಂದರು.

ವಿಜಯವಾಣಿ ಚಿತ್ರಗಳು



ಮೈಸೂರು ರಸ್ತೆಯ ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಏರ್ಪಡಿಸಿದ್ದ ಲಸಿಕೆ ಅಭಿಯಾನವನ್ನು ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ಉದ್ಘಾಟಿಸಿದರು.

> ಆಸ್ಪತ್ರೆಗಳಲ್ಲಿ ಕರೊನಾ ಲಸಿಕೆ ಪಡೆಯಲು ಜನರು ಮುಗಿಬೀಳುತ್ತಿರುವುದರಿಂದ ಅಲ್ಲಿ ಹೋಗಲು ಭಯವಾಗುತ್ತದೆ. ಇಲ್ಲಿ ಅಗತ್ಯ ಎಲ್ಲ ಸುರಕ್ಷತಾ ಕ್ರಮಗಳನ್ನು ಅನುಸರಿಸಿರುವುದರಿಂದ ಖುಷಿಯಾಗಿ ಲಸಿಕೆ ಪಡೆದಿದ್ದೇನೆ. ಆಡಳಿತ ಮಂಡಳಿಗೆ ಧನ್ಯವಾದಗಳು.
>
> | ಶಿವಪ್ರಸಾದ್ ಆರ್‌ವಿಸಿಇ ವಿದ್ಯಾರ್ಥಿ

ನೋಡಲ್ ಅಧಿಕಾರಿ ಬಸಪ್ಪ ಮಾತನಾಡಿ, ಆರ್.ಆರ್. ನಗರದ ಸುತ್ತ ಮುತ್ತಲಿನ ಜನರಿಗೆ ಲಸಿಕೆ ನೀಡುವ ಉದ್ದೇಶ ದಿಂದ ಲಸಿಕೆ ಅಭಿಯಾನ ಆಯೋಜಿಸಲಾಗಿದೆ. ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಲಸಿಕೆ ನೀಡಲಾಗುತ್ತಿದೆ. ಕಾಲೇಜಿನ ಸೌಲಭ್ಯ ನಿರ್ವಹಣೆ ಅಧಿಕಾರಿ ಮೇ. ರಾಘವೇಂದ್ರ, ಎನ್‌ಸಿಸಿ ವಿಭಾಗದ ಮುಖ್ಯಸ್ಥ ಕ್ಯಾ.ಮಹೇಂದ್ರಕುಮಾರ್ ಇತರರಿದ್ದರು.

> ಇಂದಿನ ಸಂದರ್ಭದಲ್ಲಿ ಹೊರಗಡೆ ಲಸಿಕೆ ಪಡೆಯುವುದು ಕಷ್ಟವಾಗಿದೆ. ಇಂತಹ ವೇಳೆಯಲ್ಲಿ ಕಾಲೇಜು ಆಡಳಿತ ಮಂಡಳಿ ಲಸಿಕೆ ಅಭಿಯಾನ ಆಯೋಜಿಸಿರುವುದು ಖುಷಿಯ ವಿಚಾರವಾಗಿದೆ.
>
> | ಡಾ.ಚೇತನ ಮೂರ್ತಿ ಆರ್‌ವಿಸಿಇ ಬೋಧಕಿ



ಲಸಿಕೆ ಪಡೆಯಲು ಆಗಮಿಸಿದ ವಿದ್ಯಾರ್ಥಿಗಳು, ಸಿಬ್ಬಂದಿ.